# ಸಾಮಾಜಿಕ ನೆಲೆಯಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕಿನ ಸ್ಥಳನಾಮಗಳು

*ರಮೇಶ್ ಸಿ, ಪಿ ಎಚ್ ಡಿ ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಪ್ರವೇಶ**

ಹೆಗ್ಗಡದೇವನಕೋಟೆ ತಾಲ್ಲೂಕು ಪ್ರಾಚೀನ ಕಾಲದಿಂದಲೂ ಹೇರಳವಾದ ಅರಣ್ಯ ಸಂಪತ್ತನ್ನು ಹೊಂದಿ ಸಂಪದ್ಭರಿತವಾದ ವನಸಿರಿ ನಾಡಾಗಿದೆ. ಎತ್ತ ನೋಡಿದರತ್ತ ಮಲೆನಾಡ ಸೌಂದರ್ಯವನ್ನು ಹೋಲುವಂತೆ ಹಸಿರು ಸಿರಿಯಿಂದ ಕಂಗೊಳಿಸುತ್ತಿದೆ. ತುಂಬಿ ತುಳುಕುವ ಕಣ್ತಣಿಸುವ ರಭಸವಾಗಿ ಹರಿಯುವ ನದಿಗಳು ಕಂಗೊಳಿಸಿದರೆ ನದಿಯ ಪಕ್ಕದಲ್ಲಿ ಹಾಡಿ ನಲಿಯುವ ಪಕ್ಷಿ ಸಂಕುಲಗಳು, ದಟ್ಟ ಅರಣ್ಯದ ನಡುವೆ ಜಿಂಕೆ, ಕಡವೆ, ಮೊಲ, ಹುಲಿ, ಹಂದಿ, ಆನೆ ಮುಂತಾದ ಪ್ರಾಣಿ ಸಂಕುಲಗಳು ಈ ಎಲ್ಲವೂ ಹೆಗ್ಗಡದೇವನಕೋಟೆ ತಾಲ್ಲೂಕಿನ ಪ್ರಕೃತಿ ಸೊಬಗನ್ನು ರಮಣೀಯವಾಗಿಸಿವೆ. ಹೀಗೆ ಕಾಡು ಮೇಡುಗಳಲ್ಲಿ ಅಲ್ಲಲ್ಲಿ ಹಸಿರು ಕೊಡೆಗಳಂತೆ ಅರಳಿ ನಿಂತಿರುವ ಹೆಮ್ಮರಗಳು, ಕೆರೆ, ಕಟ್ಟೆ, ಬಾವಿಗಳು ಅವುಗಳ ಆಶ್ರಯದಲ್ಲಿ ಸಮೃದ್ಧವಾಗಿ ಫಸಲು ನೀಡುತ್ತಿರುವ ಭತ್ತದ ಗದ್ದೆಗಳು, ಚಿನ್ನದ ನಾಡಿನ ಹೊಲಗಳು, ಹತ್ತಿ, ರಾಗಿ, ಜೋಳ ಬೆಳೆದು ಸಂಪದ್ಭರಿತವಾಗಿದ್ದು ಜನರ ಜೀವನಾಡಿಯಾಗಿದೆ. ಹೊಳೆಯಲ್ಲಿ ಕಳೆಯೇರುವ ಇಂಪಾಗಿ, ಸೊಂಪಾಗಿ ತಂಪಾಗಿ ಭೂ ಸಂಪತ್ತು, ವನ ಸಂಪತ್ತು, ಜಲಸಂಪತ್ತು ಸಾಹಿತ್ಯ ಸಂಪತ್ತಿನಿಂದ ಪುನ್ನಾಟದ ನಾಡು ಸಂಪದ್ಭರಿತವಾಗಿ ನಿಸರ್ಗ ರಮ್ಯತೆಯಿಂದ ಕೂಡಿದೆ. ಕುತೂಹಲವೆಂಬುದು ಮನುಷ್ಯನ ಮೂಲಭೂತವಾದ ಪ್ರವೃತ್ತಿಗಳಲ್ಲಿ ಒಂದಾಗಿದೆ. ಅವನ ಈ ಬಗೆಯ ಕುತೂಹಲ ಸ್ವಭಾವವೇ ಅವನಿಂದ ಹೊಸಹೊಸದನ್ನು ಹುಡುಕುವ ಹಾಗೆ ಮಾಡುತ್ತದೆ. ಅದಕ್ಕೆ ಅನಿವಾರ್ಯತೆ ಇದಗಿ ಬಂದಾಗ ಇಂಥ ಹುಡುಕಾಟಕ್ಕೆ ತೀವ್ರತೆ ಒದಗಿ ಬರುತ್ತದೆ. ಸ್ಥಳನಾಮದ ಅಧ್ಯಯವೆಂದರೆ ಮನುಷ್ಯನ ಬದುಕಿನ ಪೂರ್ವ ಇತಿಹಾಸವನ್ನು ಶಿಲಾಯುಗದ ಜನಜೀವನವನ್ನು ಅರಿಯುವುದಾಗಿದೆ. ಇಂಗ್ಲೇಷಿನಲ್ಲಿ ಸ್ಥಳನಾಮ ಶಾಸ್ತ್ರಕ್ಕೆ " " ಎನ್ನುತ್ತಾರೆ. ಮೂಲತಃ ಗ್ರೀಕ್ ಭಾಷೆಯ " " ಮತ್ತು " " ಎಂಬೆರೆಡು ಪದಗಳ ಸಂಯುಕ್ತ ರೂಪವೇ ಸ್ಥಳನಾಮವಾಗಿದೆ. ಇದು ಸ್ಥಳದ ಕ್ಷೇತ್ರದ ಅಧ್ಯಯನ ಎಂದಾಯಿತು. ಸ್ಥಳನಾಮಗಳಿಗೆ ಒಂದು ಮಹತ್ವದ ಅರ್ಥ ಇದೆಯೆಂದೂ ಮತ್ತು ಅರ್ಥವನ್ನು ಆ ಸ್ಥಳದ ಹಳೆಯ ನಾಮರೂಪವನ್ನು ಪರಿಶೀಲಿಸಿವುದರ ಮೂಲಕ ಖಚಿತಪಡಿಸಿಕೊಳ್ಳುವುದು ಮೊಟ್ಟಮೊದಲು ತೋರಿಸಿಕೊಟ್ಟ ಕೀರ್ತಿ 1768 ರಲ್ಲಿ ವಿದ್ವಾಂಸರಿಗೆ ಸಲ್ಲುತ್ತದೆ. ತಾಲ್ಲೂಕಿನ ಹಿಂದೂ, ಜೈನ್, ಇಸ್ಲಾಂ, ಹಾಗೂ ಕ್ರೈಸ್ತ ಧರ್ಮಾವಲಂಬಿಗಳು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿವೆ. ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಲ್ಲಿ ಮಧ್ಯಯುಗದಲ್ಲಿ ತಾಲ್ಲೂಕನ್ನು ಪ್ರವೇಶಿಸಿವೆ. ತಾಲ್ಲೂಕಿನಲ್ಲಿ ಹಿಂದೂ, ಜೈನ್ ಧರ್ಮವಾದರೆಅಧಿಕ ಸಂಖ್ಯೆಯಲ್ಲಿದ್ದಾರೆ. ನಂತರದ ಸ್ಥಾನದಲ್ಲಿ ಇಸ್ಲಾಂ ಧರ್ಮದವರಿದ್ದು ಅದರಲ್ಲೂ ಮುಸ್ಲಿಂರು ವಿಸೇಷವಾಗಿ ನಗರ ಪ್ರದೇಶದಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಜೈನ ಹಾಗೂ ಕ್ರೈಸ್ತ ಧರ್ಮದವರು ತಾಲ್ಲೂಕಿನಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ನೆಲೆಸಿದ್ದಾರೆ. ಜೈನ ಹಾಗೂ ಕ್ರೈಸ್ತ ಧರ್ಮದವರು ತಾಲ್ಲೂಕಿನ ಜೋನಿಗರ ಬೀದಿಯು ಜೈನರು ವಾಸಿಸುವ ಮನೆಗಳಿರುವ ರಸ್ತೆಯಾಗಿದೆ. ಜೋನಿಗೇರಿ>ಜೈನರ ಬೀದಿಯೇ ಆಗಿದೆ. ಅಲ್ಲದೆ ಸರಗೂರು, ಕಳಸೂರು, ಮುಳ್ಳೂರು, ಚಾಮಲಾಪುರ, ಮಳಲಿಗಳಲ್ಲಿ ಹೆಚ್ಚಾಗಿ ಜೈನ ಧರ್ಮದವರು ವಾಸಿಸುತ್ತಿದ್ದಾರೆ. ಕ್ಯಾಥೊಲಿಕ್ ಧರ್ಮದವರು, ನಾಗನಹಳ್ಳಿ, ಹೆಗ್ಗಡದೇವನಕೋಟೆ, ಹ್ಯಾಂಡ್ ಪೋಸ್ಟ್, ಕನ್ನೇನಹಳ್ಳಿ, ಪಡುಕೋಟೆ ಇತ್ಯಾದಿ ಗ್ರಾಮಗಳಲ್ಲಿ ನೆಲೆಸಿದ್ದಾರೆ. ತಾಲ್ಲೂಕಿನಲ್ಲಿಯೂ ಕೆಲವು ಕ್ರೈಸ್ತ ಚರ್ಚ್‌ಗಳು ಕಂಡು ಬರುತ್ತವೆ.

ಇತ್ತೀಚೆಗೆ ಸರ್ಕಾರವು ಜಾತಿ ಗಣತಿಯನ್ನು ಮಾಡಿಸಲು ಹೊರಟಿದೆ. ಜಾತಿವಾರು ಜನಗಣತಿಯನ್ನು 1941 ರಿಂದ ನಡೆಸಲಾಗುತ್ತಿದ್ದುದ್ದರಿಂದ ಆವರೆಗಿನ ಜಾತಿವಾರು ಜನಸಂಖ್ಯಾ ವಿವರ ಲಭಿಸುತ್ತದೆ. ಅದೇನೆ ಇರಲಿ ತಾಲ್ಲೂಕಿನಲ್ಲಿ ಎಲ್ಲ ಜಾತಿಯ ಜನರೂ ವಾಸವಾಗಿದ್ದು ಅವರಲ್ಲಿ ಪ್ರಮುಖವಾಗಿ ಒಕ್ಕಲಿಗರು, ದಲಿತರು, ವೀರಶೈವರು, ಕುರುಬರು, ಬ್ರಾಹ್ಮಣರು, ನಾಮಧಾರಿಗೌಡರು, ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಗೊಲ್ಲರು, ಪರಿವಾರ ನಾಯಕರು, ಈಡಿಗರು, ಕುಂಬಾರರು, ಕುಂಚಟಿಗರು, ಶ್ರೀ ವೈಷ್ಣವರು, ಉಪ್ಪಾರರು, ಬೆಸ್ತರು, ಬಣಜಿಗರು, ಅರಸರು, ಆದಿವಾಸಿಗಳು, ಗಾಣಿಗರು, ತಮ್ಮಡಿಗಳು, ದೇವಾಂಗರು, ವಡ್ಡರು, ವಿಶ್ವಕರ್ಮರು, ವೈಶ್ಯರು ಮುಂತಾದ ಜಾತಿಯ ಜನರಿದ್ದು ಅವರದೆ ಆದ ಆಚಾರ–ವಿಚಾರ, ಸಂಸ್ಕೃತಿ, ನೆಲೆಗಳಿಂದ ಸಾಂಸ್ಕೃತಿಕ ಬದುಕಿನಲ್ಲಿ ಊರುಗಳನ್ನು ನಿರ್ಮಿಸಿಕೊಂಡು ಆ ಊರುಗಳು ಅಭಿವೃದ್ಧಿ ಹೊಂದಲು ಕಾರಣರಾಗಿದ್ದಾರೆ ಹಾಗೂ ಸ್ಥಳನಾಮದ ಉದಯಕ್ಕೆ ಕಾರಣವಾಗಿದ್ದರೆ. ಇವರಲ್ಲದೆ ತಾಲ್ಲೂಕಿನಲ್ಲಿ ದೊಂಬಿದಾಸರು, ಕೋಲೆ ಬಸವರು,

ಹಾವಾಡಿಗರು, ಕರಡಿ ಕುಣಿಸುವವರು, ಬುಡಬುಡಿಕೆಯವರು, ಊರುಮರಿಗಳು ಮೊದಲಾದ ಅಲೆಮಾರಿ ಜನಗಳು ಅಲ್ಲಲ್ಲಿ ವಾಸವಾಗಿದ್ದು ಕಾಣಸಿಗುತ್ತಾರೆ.

ಸರ್ವಧರ್ಮ ಸಮನ್ವಯದಂತೆ ತಾಲ್ಲೂಕಿನಲ್ಲಿ ಅವರದೇ ಆದ ಆಚರಣೆಗಳು, ಹಬ್ಬಗಳು, ಜಾತ್ರೆಗಳು ನೆರವೇರುತ್ತವೆ. ನಾಡಿನ ಇತರೆಡೆಗಳಂತೆ ಅವರವರ ಧರ್ಮಕ್ಕನುಗುಣವಾಗಿ ತಾಲ್ಲೂಕಿನ ಜನರು ವರ್ಷದುದ್ದಕ್ಕೂ ಉಪವಾಸವ್ರತ, ಹಾಗೂ ಹಬ್ಬಗಳನ್ನೂ ವಿವಿಧ ಸಂದರ್ಭಗಳಲ್ಲಿ ಆಚರಿಸುತ್ತಾರೆ. ಗ್ರಾಮದೇವತಾ ಹಬ್ಬ. ಜಾತ್ರೆಗಳು ಗ್ರಾಮೀಣ ಪ್ರದೇಶಗಳಲ್ಲಿ ಜರುಗುತ್ತವೆ. ತಾಲ್ಲೂಕಿನಲ್ಲಿ ಕಾಣುವ ಮಹದೇಶ್ವರ ಸ್ವಾಮಿ, ರಾಮಲಿಂಗೇಶ್ವರ, ಚಿಕ್ಕದೇವಮ್ಮ ಲಕ್ಷ್ಮೀ ನರಸಿಂಹ, ಲಕ್ಷ್ಮೀ ನರಸಿಂಹ, ಲಕ್ಷ್ಮೀಕಾಂತ, ಕಾಮೇಶ್ವರ, ಮಾರಮ್ಮ, ಬಸವನಗುಡಿ, ರಾಮಮಂದಿರ, ಗಣಪತಿ (ತಾಲ್ಲೂಕಿನಲ್ಲಿ ಹೊಸದಾಗಿ ಚಿಕ್ಕಕೆರೆಯೂರು ಗ್ರಾಮದಲ್ಲಿ ಪಂಚಮುಖಿ ವಿನಾಯಕ ದೇವಾಲಯವಿದೆ). ಮುಸ್ಲಿಂ ಪಂಗಡಗಳಾದ ಷಿಯಾ ಮತ್ತು ಸಿನ್ನಿಗಳು ಆಚರಿಸುವ ಮೊಹರಂ, ರಂಜಾನ್, ಬಕ್ರಿದ್ ಮುಂತಾದ ಹಬ್ಬಗಳನ್ನು ಸಂಭ್ರಮದಿಂದ ಆಚರೊಇಸುತ್ತಾರೆ. ಕ್ರೈಸ್ತ ಚರ್ಚ್‌ಗಳು ನಾಗನಹಳ್ಳಿ ಹೆಗ್ಗಡದೇವನಕೋಟೆ, ಪಡುಕೋಟೆ, ಕನ್ನೇನಹಳ್ಳಿ, ಜೊಂಪಾನಹಳ್ಳಿ ಗ್ರಾಮಗಳಲ್ಲಿ ನಿರ್ಮಾಣ ಮಾಡಿಕೊಂಡು ಪ್ರಾರ್ಥನೆ ಸಲ್ಲಿಸುತ್ತಾರೆ. ನಾಗನಹಳ್ಳಿಯಲ್ಲಿ ಒಕ್ಕಲಿಗ ಜನರು ಒಂದು ಬೀದಿಯವರೆಲ್ಲರು ಕ್ರೈಸ್ತ ಮತಕ್ಕೆ ಮತಾಂತರವಾಗಿದ್ದಾರೆ.

ತಾಲ್ಲೂಕಿನ ಹಲವಾರು ಗ್ರಾಮನಾಮಗಳು ಜಾತಿವಾಚಕವಾಗಿಯೂ, ಜನಾಂಗ ವಾಚಕವಾಗಿಯೂ, ವೃತ್ತಿವಾಚಕವಾಗಿಯೂ ಕಂಡುಬಂದಿರುವುದನ್ನು ಪಟ್ಟಿಮಾಡಬಹುದು. ಜಾತಿವಾಚಕವಾಗಿ ಮೂಡಿಬಂದಿರುವ ಸ್ಥಳನಾಮಗಳೆಂದರೆ ಒಕ್ಕಲಿಗರೆ ಇರುವ ಊರು ಗೌಡ ಎಂಬ ಹೆಸರಿನ ವಾರ್ಗಿಕದೊಡನೆ ಹೆಸರಲ್ಲಿ ಬೆರೆತು ಹೋಗಿವೆ. ಕಂದೇಗೌಡನಪುರ, ಕೊಳ್ಳೆಗೌಡನಹಳ್ಳಿ, ಕೋನೆಗೌಡನಹುಂಡಿ, ಗಂಗನಹೊಸಹಳ್ಳಿ, ಚನ್ನೇಗೌಡನಹುಂಡಿ, ಗೇಂಡೇಗೌಡರ ಕಾಲೋನಿ, ಬಾಚೇಗೌಡನಹಳ್ಳಿ, ಸೋಮೇಗೌಡನಹುಂಡಿ, ಮಂಚೇಗೌಡನಹಳ್ಳಿ ಇತ್ಯಾದಿ ಹಾಗೆಯೇ ವೀರಶೈವರೆ ಇರುವ ಊರುಗಳೆಂದರೆ ಆಲನಹಳ್ಳಿ, ಚಿಕ್ಕನಂದಿ, ನಂದಿನಾಥಪುರ ಇತ್ಯಾದಿ, ಬ್ರಾಹ್ಮಣರಿದ್ದ ಸ್ಥಳ ಹಾರೋಪುರ, ಐನೂರು ಮಾರಿಗುಡಿ, ಅಗಸರಿದ್ಧ ಊರು ಅಗಸನಹುಂಡಿ , ಕುಬರು ಇದ್ದ ಸ್ಥಳವೇ ಕುವರ ಹಾಡಿ, ಜನಾಂಗವಾಚಿಯಾಗಿ ವಡ್ಡರಿದ್ಧ ಸ್ಥಳವೇ ವಡ್ಡರಗುಡಿ, ಹೀಗೆ ಇಲ್ಲಿನ ಸ್ಥಳನಾಮ ನಿರ್ಮಾಣವಾಗುವಲ್ಲಿ ಸ್ಥಳವೇ ವಡ್ಡರಗುಡಿ ಕಾರಣಗಳಿಂದಲೂ ಸೃಷ್ಟಿಯಾಗಿವೆ.

ಈ ಸಾಮಾಜಿಕ ವ್ಯವಸ್ಥೆಯಲ್ಲಿ ಗುಂಪು, ವರ್ಗ, ಕಟ್ಟಳೆ, ಸಂಪ್ರದಾಯ, ಮೌಲ್ಯ ಮುಂತಾದ ಅಂಶಗಳು ಗಮನಾರ್ಹವಾಗಿವೆ. ಎಲ್ಲಾ ಮಾನವರು ವರ್ಗ, ಜಾತಿ, ಗುಂಪುಗಳು ಸಾಮಾಜೀಕರಣದ ಪ್ರಕ್ರಿಯೆಗೆ ಇಳಗಾಗುತ್ತಿವೆ. ಇದರಿಂದ ಸಮಾಜದಲ್ಲಿ ಶಾಂತಿ, ಸಮಧಾನ ಮತ್ತು ಸಮತೋಲನಗಳು ಏರ್ಪಡುತ್ತವೆ. ಸಾಂಸ್ಕ್ರತಿಕ ಪರಂಪರೆ ಸ್ವಾಭಾವಿಕ ನಿಯಂತ್ರಣ ಮತ್ತು ನಂಬಿಕೆಗಳನ್ನು ಪೋಷಿಸುತ್ತದೆ. ಹೀಗೆ ಎಲ್ಲಾ ಹಂತಗಳಲ್ಲೂ ಭೌಗೋಳಿಕ ಇತಿಮಿತಿಯೊಳಗೆ ಸ್ಥಳನಾಮಗಳು ನಿರ್ಮಾಣವಾಗುತ್ತಾ ಬಂದು ಒಂದು ನಿರ್ದಿಷ್ಟ ನೆಲೆಯಲ್ಲಿ ಸಮಾಜ ರಚನೆಯಾಗಿದೆ. ಹೀಗೆ ಹೆಗ್ಗಡದೇವವನಕೋಟೆ ತಾಲ್ಲೂಕಿನ ಸಾಮಾಜಿಕ ಇತಿಹಾಸಗಳಿಂದ ತಿಳಿಯಬಹುದಾಗಿದೆ. ಹೀಗೆ ತಾಲ್ಲೂಕಿನ ಅನೇಕ ರಾಜ ಮನೆತನಗಳು ಆಳ್ವಿಕೆ ಮಾಡಿ ದೊರೆಗಳು ಜನವಾಸ್ತವ್ಯಕ್ಕೆ ಒಳ್ಳೆಯ ಬುನಾದಿಯನ್ನು ಹಾಕಿಕೊಟ್ಟಿದ್ದಾರೆ ಬೇರೆ ಬೇರೆ ಜಾತಿ ಧರ್ಮಗಳ ಜನಾಂಗಗಳು ನೆಲೆಸಲು ಅನುಕೂಲ ಮಾಡಿಕೊಟ್ಟಿದ್ದಾರೆ. ಈ ನೆಲವನ್ನು ಆಳಿದ ಮನೆತನಗಳಿಗೆ ತಕ್ಕಂತೆ ಇಲ್ಲಿನ ಜನ ಆಚಾರ ವಿಚಾರಗಳನ್ನು ನಡೆಸುತ್ತ ಮನೆಗಳನ್ನು ನಿರ್ಮಾಣ ಮಾಡುತ್ತಾ ನೆಲೆಯಾಗುತ್ತಾ ಬಂದಿದ್ದಾರೆ.

ತಾಲ್ಲೂಕಿನಲ್ಲಿ ವರ್ಣವ್ಯವಸ್ಥೆ, ಜತಿ ವ್ಯವ್ಸ್ಥೆಯನನು ಆಧರಿಸಿ ಕೆಲವು ಊರುಗಳು ನಿರ್ಮಾಣಗೊಂಡಿವೆ. ಉದಾಹರಣೆಗೆ ತೆಲಗು ಮಸಹಳ್ಳಿ, ವಡ್ಡರಗುಡಿ, ವಡ್ಡರಪಾಳ್ಯ, ಪೆಂಜಹಳ್ಳಿ, ಅಗಸನಹುಂಡಿ, ಅಣ್ಣೂರು, ಎಣ್ಣೆಗೆರೆ ಕಾವಲ್ ಇತ್ಯಾದಿ ಊರುಗಳು ಜನಾಂಗವನ್ನಾಧರಿವೆ. ಉದ್ಯೋಗ ಮತ್ತು ಜಾತಿಯನ್ನು ಅನುಸರಿಸಿ ಸ್ಥಳನಾಮಗಳು ಹುಟ್ಟಿಕೊಂಡು ಸಾಮಾಜಿಕ ಎಳೆಯನ್ನು ಪ್ರತಿಬಿಂಬಿಸುತ್ತವೆ.

ಮಠ ಎಂಬ ಪದವು ಧಾರ್ಮಿಕ ಸಂಸ್ಥೆಯನ್ನು ಸೂಚಿಸುತ್ತದೆ. ಅರ್ಚಕ, ಗು, ಪಂಡಿತರ ಊರುಗಳನ್ನು ಗನಮನಿಸಿದಾಗ ಕೆಲವು ಊರುಗಳು, ನಿರ್ಮಾಣಕ್ಕೆ ಸಾಮಾಜಿಕ, ಧಾರ್ಮಿಕ ಸಂಸ್ಥೆಗಳು ಕಾರಣಗಳಾಗಿರುತ್ತದೆ. ಉದಾಹರಣೆಗೆ: ಐನೂರು ಮಾರಿಗುಡಿ, ಮಠಕೆರೆ, ಹಾರೋಪುರ, ಮಠದಕಟ್ಟೆ, ಮೂಡಲಮಠ, ಪಡುವಲಮಠ.

ಒಂದು ಊರಿನ ಅಥವಾ ಆ ಪ್ರದೇಶದಲ್ಲಿ ವಾಸಿಸುವ ಜನರು ಉಪಯೋಗಿಸುವ ಆಹಾರ ಪದಾರ್ಥಗಳ ಹೆಸರುಗಳು ಕೂಡ ಸ್ಥಳನಾಮಗಳಿಗೆ ಕಾರಣಗಳಾಗಿವೆ. ಧ್ಯಾನ್ಯಗಳ ಹೆಸರು, ಹಣ್ಣುಗಳ ಹೆಸರು, ಸಸ್ಯವಾಸಿಗಳ ಹೆಸರು ಹೀಗೆ ನಿರ್ಮಾಣಗೊಳ್ಳುತ್ತವೆ. ಉದಾ: ತೋಟಹಳ್ಳಿ, ನಲ್ಲೂರು, ನೇರಳೆ, ಬದನಕುಪ್ಪೆ, ಬಿದರಹಳ್ಳಿ, ಬೆನ್ನಗೆರೆ, ಮಳಲಗದ್ದೆ, ಹುಣಸೆಕುಪ್ಪೆ, ಹುರುಳಿಪುರ.

ಹೆಗ್ಗಡದೇವನ ಕೋಟೆ ತಾಲ್ಲೂಕಿನ ಸುತ್ತಮುತ್ತ ಇರುವ ಸಾಮಾಜಿಕ ಹಿನ್ನೆಲೆಯಲ್ಲಿ ಕಂಡುಬರುವ ಸ್ಥಳನಾಮಗಳ ವಿವರಣೆಯನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

**ಅಗಸನಹುಂಡಿ :**

ತಾಲ್ಲೂಕಿನಲ್ಲಿ ಅಗಸನವಾಡಿ ಎಂಬ ಗ್ರಾಮವಿದೆ. ಮಡಿವಾಳ, ದೋಬಿ ಎಂದೆಲ್ಲಾ ಕರೆಯಲ್ಪಡುವ ಇರುವ ಸಮಾಜದ ವಿವಿಧ ವರ್ಗಗಳಿಗೆ ಬಟ್ಟೆ ಒಗೆದು ಮಡಿ ಮಾಡಿಕೊಡುವ ಸಾಂಪ್ರಾದಾಯಿಕ ವೃತ್ತಿಯವರು. ಹಾಗೆಯೇ ಊರಹಬ್ಬ, ಗ್ರಾಮದೇವತೆಯ ಜಾತ್ರೆ ಮದುವೆ ಶುಭಕಾರ್ಯಗಳ ಸಂದರ್ಭದಲ್ಲಿ ನಡೆಮುಡಿ ಸೇವೆ ಹಾಗೂ ಪಂಜುಸೇವೆ ಮಾಡುತ್ತಾರೆ. ಆದರೆಇಂದೂ ಸಾಮಾಜಿಕ ಪರಿವರ್ತನೆಗೆ ಒಳಗಾದ ಇವರು ಪರಿವರ್ತನೆಗೆ ಕುಲಕಸುಬುನ ಜೊತೆಗೆ ಇತರೇ ವೃತ್ತಿಗಳಾದ ವ್ಯವಸಾಯ, ವ್ಯಾಪಾರ ಮಾಡಿ ಜೀವನ ಸಾಗಿಸುತ್ತಿದ್ದಾರೆ. ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ಬೆರಳಿಣಿಕೆಯ ಕುಟುಂಬಗಳು ಕಂಡು ಬರುತ್ತವೆ.

- ಐನೂರು ಮಾರಿಗುಡಿ ಜಂಗಲ್ : ಪೂಜೆ ಪುನಸ್ಕಾರ ಮಾಡಿಕೊಂಡು ಸ್ಥಳೀಯ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ಕಾಯಕ ಮಾಡಿಕೊಂಡು ಜೀವನ ಸಾಗಿಸುತ್ತಿದ್ದು ಬ್ರಾಹ್ಮಣರಿದ್ದ ಊರು. ಹಿಂದಿನ ಆಳರಸರ ಕಾಲದಲ್ಲಿ ಅಗ್ರಹಾರಗಳನ್ನು ಬ್ರಾಹ್ಮಣರಿಗೆ ದತ್ತಿ ಬಿಟ್ಟ ವಿಚಾರಗಳು ಶಾಸನಗಳಿಂದ ತಿಳಿದುಬರುತ್ತದೆ.
- ಕಂಚಮಳ್ಳಿ : ಕಂಚುಮುಟ್ಟುಗಳಿಂದ ಅನೇಕ ಬಗೆಯ ಮನೆಕೆಲಸಕ್ಕಾಗಿ ಬೇಕಾಗುವ ಸಾಮಾಗ್ರಿಗಳನ್ನು ತಯಾರು ಮಾಡಿ, ಅವುಗಳನ್ನು ಮಾರಿ ಜೀವಸಾಗಿಸುತ್ತಿದ್ದರು. ಕಂಚುಗಾರರಿಂದ ರಾಜಮಹಾರಾಜರು ಬೇಕಾದ ಶಿಲ್ಪಗಳನ್ನು ತಯಾರು ಮಾಡಿಸುತ್ತಿದ್ದರು. ಪ್ರತಿಯೊಂದು ಗ್ರಾಮಗಳಲ್ಲಿ ದೇವಾಲಯಗಳನು ನಿರ್ಮಿಸುವಾಗ ಕಂಚುಗಾರರಿಂದ ಬೇಕಾದ ಸಾಮಾರಿಗಳನ್ನು ತಯಾರು ಮಾಡಿಸುತ್ತಿದ್ದರು. ಹೀಗೆ ಪಾಂಚಾಲರಲ್ಲಿ ಒಂದು ಪಂಗಡವಾಗಿದ್ದ ಕಂಚುಗರರಿದ್ದ ಸ್ಥಳವೇ ಕಂಚಮಳ್ಳಿ ಎಂಬ ಗ್ರಾಮನಾಮವಾಗಿ ಇಂದಿಗೂ ಅದೇ ಹೆಎಸರಿನಿಂದಲೇ ಉಳಿದುಕೊಂಡು ಬಂದಿದೆ.
- ಗಂಗಡಹೊಸಹಳ್ಳಿ : ಒಕ್ಕಲಿಗ ಗೌಡರು ಎಂದೂ ಕರೆಯಲ್ಪಡುವ ಇವರು ಮೂಲತ: ಕೃಷಿಕರು. ಇವರಲ್ಲಿ ಅನೇಕ ಪ್ರಭೇದಗಳಿದ್ದರು ಗಂಗಡಕಾರ ಒಕ್ಕಲಿಗರು ತಾಲ್ಲೂಕಿನಲ್ಲಿ ವಿಶೇಷವಾಗಿ ಕಂಡುಬರುತ್ತಾರೆ. ಕೃಷಿಯನ್ನು ಅವಲಂಬಿಸಿ ಬದುಕು ಆರಂಭಿಸಿದ ಈ ಜನತೆ ಹೊಸದಾಗಿ ಬಂದು ವಾಸ್ತವ್ಯ ಹೂಡಿದ ಸ್ಥಳಕ್ಕೆ ಹೊಸಹಳ್ಳಿ ಎಂಬ ಹೆಸರಿನಿಂದ ಕರೆದರು. ತಾಲ್ಲೂಕಿನಲ್ಲಿ ಐದಕ್ಕಿಂತ ಹೆಚ್ಚು ಹೊಸಹಳ್ಳಿಗಳು ಇದ್ದುದರಿಂದ ಈ ಗ್ರಾಮಕ್ಕೆ ಗಂಗಡಹೊಸಹಳ್ಳಿ ಎಂಬ ಜಾತಿಸೂಚಕವಾಗಿ ಸ್ಥಳನಾಮವಾಗಿದೆ.
- ಗೊಲ್ಲನಬೀಡು: ಗೊಲ್ಲರು ವಾಸಮಾಡುತ್ತಿದ್ದ ಊರನ್ನು ಗೊಲ್ಲನಬೀಡು ಎಂಬ ಹೆಸರಿನಿಂದ ಕರೆರಿದ್ದಾರೆ. ಗುಡ್ಡಗಾಡು ಜಾಗಗಳಲ್ಲಿ ದನಕರುಗಳನ್ನು ಮೇಯಲು ಬಿಟ್ಟು ಅದರಿಂದಲೇ ಜೀವನವನನು ಸಾಗಿಸುತ್ತಾ ಬಂದ ಜನರಿದ್ದ ಸ್ಥಳವೇ ಗೊಲ್ಲನಬಿಡು ಶ್ರೀಕೃಷ್ಣನ ಪರಮಭಕ್ತರಾದ ಇವರು ಗೋಮಾಳಗಳಲ್ಲಿ ದನ ಮೇಯಿಸಿ ಪರಮಭಕ್ತರಾದ ಇವರು ಗೋಮಾಳಗಳಲ್ಲಿ ದನ ಮೇಯಿಸಿ ಸಾಕಾಣಿಕೆಯಿಂದ ಬದುಕು ಕಟ್ಟಿಕೊಂಡಿದ್ದರು. ಗೊಲ್ಲರು ಬೇರೆಯವರ ಮನೆಯಲ್ಲಿರುವ ದನಕರುಗಳನ್ನು ಮೇಯಿಸಿಕೊಂಡು ಬಂದು ಅದನ್ನೆ ಮುಖ್ಯವೃತ್ತಿ ಮಾಡಿಕೊಂಡಿದ್ದರು. ಹಿಂದೆ ಇವರಿಗೆ ಯಾವುದೇ ರೀತಿಯ ಜಮೀನು ಇರಲಿಲ್ಲ.
- ಬೋವಿ ಕಾಲೋನಿ ಇದೊಂದು ವೃತ್ತಿವಾಚಕ ಸ್ತಳನಾಮವಾಗಿದೆ. ಬೋವಿ ಅಂದರೆ ತೆಲಗು ಭಾಷೆಯನ್ನಾಡುವ ಜನರು ಆಂದ್ರದಿಂದ ವಲಸೆ ಬಂದು ಕೂಲಿ ಕೆಲಸ ಮಾಡಿಕೊಂಡು ಬದುಕಲು ಗುಡಿಸಲು ನಿರ್ಮಾಣಮಾಡಿಕೊಂಡ ಸ್ಥಳವೇ ಬೋವಿ ಕಾಲೋನಿ. ಕಲ್ಲು ಕುಟಿಗರನ್ನು ಬೋವಿಗಳೆಂದು ಕರೆಯಲಾಗಿದೆ. ಕಲ್ಲು ಹೊಡೆದು ನಿರ್ಮಾಣ ಕಾರ್ಯಗಳಿಗೆ ಕೆಲಸ ಮಾಡುವ ಜನರು ವಾಸಿಸುತ್ತಿದ್ದ ಸ್ಥಳವೇ ಬೋವಿ ಕಾಲೋನಿಯಾಗಿದೆ.

- ಮಠಕೆರೆ : ಮಠ ಎಂಬ ಪದವು ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಕೆಲಸ ಮಾಡುವ ಸ್ಥಳವನ್ನು ಸೂಚಿಸುತ್ತದೆ. ತಾಲ್ಲೂಕಿನಲ್ಲಿ ಎರಡು ಮಠಕೆರೆಗಳು ಕಂಡು ಬಂದಿದ್ದು ಮೊದಲಿಗೆ ಪೂಜಾರ್ಯಗಳನ್ನು ನೆರವೇರಿಸುತ್ತಿದ್ದ ಸ್ಥಳವೇ ಮಠಕೆರೆಯಾಗಿದೆ.
- ಪಂಜಹಳ್ಳಿ : ಈ ಗ್ರಾಮದಲ್ಲಿ ಮಡಿವಾಳರು ದೇವತಾಕಾರ್ಯಗಳು, ನಡೆಮಡಿ, ಪಂಜು ಹಿಡಿಯುವ ಕೆಲಸ ಕಾರ್ಯಗಳಲ್ಲಿ ಹೆಚ್ಚು ನಿರತರಾಗಿದ್ದಿರಬಹುದು. ಇವರು ಗ್ರಾಮ ದೇವತೆಯ ಜಾತ್ರೆ ಸಮಯದಲ್ಲಿ ಪಂಜು ಸೇವೆ ಮಾಡುವುದರಿಂದ ಈ ಗ್ರಾಮಕ್ಕೆ ಪೆಂಜಹಳ್ಳೀ ಎಂಬ ಹೆಸರು ಬಂದಿದೆ.
- ಮಂಚನಹಳ್ಳಿ : ಈ ಗ್ರಾಮವು ಕಾಡಿನ ಸಮೀಪದಲ್ಲಿ ನಿರ್ಮಾಣವಾಗಿರುವ ಸ್ಥಳವಾಗಿದೆ. ವಿಶ್ವಕರ್ಮ ಜಾತಿಯವರು ಮರದ ಸಾಮಗ್ರಿಗಲನ್ನು ಸಿದ್ದಪಡಿಸಿ ಮಾರಾಟ ಮಾಡಿ ಬದುಕು ಸಾಗಿಸುತ್ತಿದ್ದರು. ಕಾಡಿನಲ್ಲಿ ಸಿಗುವ ಉಪಯುಕ್ತವಾದ ಮರಗಳನ್ನು ತಂದು ಗೃಹ ಬಳಕೆಯ ಸಾಮಾಗ್ರಿಗಳನ್ನು ತಯಾರಿಸುತ್ತಿದ್ದರು. ಅದರಲ್ಲಿಯೂ ಮಂಚಗಳನ್ನು ತಯಾರು ಮಾಡುತ್ತಿದ್ದರು. ಎತ್ತಿನ ಗಾಡಿಗಳನ್ನು ಮರದ ಸಹಾಯದಿಂದ ತಯಾರಿಸುತ್ತಿದ್ದು ಇವರು ನೆಲೆಕಂಡು ಕೊಂಡ ಸ್ಥಳವೇ ಮಂಚಹಳ್ಳಿಯಾಗಿದೆ.
- ಮಚ್ಚೂರು : ವಿಶ್ವಕರ್ಮ ಜಾತಿಯ ಜನರು ಕುಲುಮೆಗಲ್ಲಲಿ ಕಬ್ಬಿಣದ ಸಲಕರಣೆಗಳಿಂದ ಮಚ್ಚನ್ನು ತಯಾರಿಸಿ ಮಾರಾಟ ಮಾಡಲು ಬದುಕು ಕಟ್ಟಿಕೊಂಡ ಸ್ಥಳವೇ ಮಚ್ಚೂರು ಆಹಾರ ಸಂಪಾದನೆಯ ಮಾರ್ಗವನ್ನು ಕಲಿತ ಮಾನವ ಶಿಲಾಯುಗದಲ್ಲಿ ಆಯುಧಗಳ ತಯಾರಿಕೆಯ ಕಲೆಯನ್ನು ಕಲಿತುಕೊಂಡು ಹೀಗೆ ತಯಾರಿಸಿದ ಸಲಕರಣೆಗಳನ್ನು ಕೃಷಿಗೆ ಬೇಕಾದಂತೆ ಬಳಸಲು ಆರಂಭಿಸಿದ. ಕಾಡಿನ ಭಾಗವಾದ್ದರಿಂದ ಗುಡಿಸಲು ಮನೆ ನಿರ್ಮಾಣ ಮಾಡಲು ಮರದ ಸಾಮಾಗ್ರಿಗಳು ಬೇಕಾಗಿದ್ದು, ಅವುಗಳನ್ನು ಸಿದ್ಧಮಾಡಲು ಬೇಕಾಧ ಸಲಕರಣೆಯಾದ ಮಚ್ಚು ತಯಾರಿಕೆಯ ಸ್ಥಳವೇ ಮಚ್ಚೂರು ಆಯಿತು.
- ಮಣೆಗಾರನಹುಂಡಿ : ಮಣೆಗಾರನ+ ಹುಂಡಿ = ಮಣೆಗಾರನ ಹುಂಡಿ ಸ್ಥಳನಾಮವಾಗಿದೆ. ಮಣೆಗಾರ ಅಂದರೆ ದೇವಾಲಯ, ಮಠ, ಅರಮನೆ ಮುಂತಾವುಗಳಲ್ಲಿನ ಮೇಲ್ವಿಚಾರಕ ಎಂಬರ್ಥವಿದೆ. ಹೀಗಿ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ಮಣೆಗಾರನು ವಾಸವಿದ್ದ ಊರೇ ಆತನ ಹೆಸರಿನಿಂದ ಗುರುತಿಸಿಕೊಂಡು ಮಣೆಗಾರನಹುಂಡಿ ಎಂದು ಗ್ರಾಮನಾಮವಾಗಿದೆ.
- ಮಚನಾಯಕನಹಳ್ಳಿ : ಮಚನಾಯಕನೆಂಬ ಐತಿಹಾಸಿಕ ವ್ಯಕ್ತಿಯ ಹೆಸರಿನಿಂದ ಹುಟ್ಟಿಕೊಂಡುಊರೆ ಮಾಚನಾಯಕನಹಳ್ಳಿ ಮಾಸ್ತಿಯವರ ಕಾಕನಕೋಟೆ ನಾಕಟದಲ್ಲಿ ಬರುವ ಪಾತ್ರಧಾರಿ ಮಾಚನಾಯಕ ತಾಲ್ಲೂಕಿನ ಹೆಗ್ಗಡೆಗಳ ಆಳ್ವಿಕೆ ನಡೆಯುತ್ತಿದ್ದಾಗ ಹೆಗ್ಗಡೆಗಳಿಗೆ ಮಂತ್ರಿಯಾಗಿ ಕರ್ಾನಿರ್ವಹಿಸುತಿದ್ದ ವ್ಯಕ್ತಿಯ ಹೆಸರೆ ಮಾಚನಾಯಕ ಈ ಮಾಚ ಎಂಬ ವ್ಯಕ್ತಿಯು ಈ ಗ್ರಾಮದ ಮುಖಂಡನಾಗಿದ್ದರಿಂದಲೇ ಆತನ ಹೆಸರಿನಿಂದಲೇ ಗ್ರಾಮಕ್ಕೆ ಮಾಚನಾಯಕನಹಳ್ಳಿ ಎಂಬ ಹೆಸರು ಬಂದಿದೆ.
- ಮಾದಾಪುರ : ತಾಲ್ಲೂಕಿನ ಎಲ್ಲಾ ಭಾಗಗಳಲ್ಲೂ ಹರಡಿಕೊಂಡಿರುವ ಇವರನ್ನು ಪದ್ಮಜಾತಿ ಜಾಂಬವ ಆದಿಜಾಂಬವಂತ ಮಾತಂಗ ಬೆಂಗಾರ ಹಾಗೂ ಎಡಗೈಯನವರೆಂದು ಕರೆಯಲಾಗುತ್ತಿದ್ದು, ಮಾತಂಗಿ ಹಾಗೂ ಮಾರಮ್ಮ ಇವರ ಕುಲದೇವತೆಯರು ಚರ್ಮದ ಕಾಯಕ ಇವರ ಕುಲಕಸುಬಾಗಿದ್ದು ಕೃಷಿ ಕಾರ್ಮಿಕರಾಗಿ ಕೂಡ ಹೊಲದಲ್ಲಿ ದುಡಿಯುತ್ತಾರೆ. ಇವರು ತಮಟೆ ರಾಮಡೋಲುಗಳನ್ನು ಲಯಬದ್ಧವಾಗಿ ಬಾರಿಸುವುದರಲ್ಲಿ ನಿಪುಣರಾಗಿರುತ್ತಾರೆ. ಹೀಗೆ ಮಾದಿಗರು ವಾಸವಿದ್ದ ಸ್ಥಳವೇ ಮಾದಾಪುರ ಎಂಬ ಹೆಸರಾಯಿತು.
- ವಡ್ಡರಗುಡಿ : ಒರಿಸ್ಸಾ ಮೂಲದಿಂದ ಬಂದಂತಹ ವಡ್ಡ ಜನಾಂಗದ ಜನರು ಗುಡಿಸಲುಗಳನ್ನು ನಿರ್ಮಿಸಿಕೊಂಡು ಬದುಕುತ್ತಿದ್ದ ಸ್ಥಳವೇ ವಡ್ಡರಗುಡಿಯಾಯಿತು. ಇವರು ಕಲ್ಲು ಕೆಲಸ ಮಾಡುವ ಕಲ್ಲು ಕುಟಿಗರು. ಕೆರೆ ಕಟ್ಟೆಗಳನ್ನು ಕಟ್ಟುವುದು. ಬಾವಿ ತೊಡುವುದು ಇವರ ವೃತಿಯಾಗಿದೆ.

**ಉಪಸಂಹಾರ**

ಸ್ಥಳನಾಮದ ಅಧ್ಯೆಯನ ಕೈಗೊಂಡಾಗ ಗತಿಸಿಹೋಗಿರುವ ಇತಿಹಾಸದ ನೆನಪುಗಳನ್ನು ಪುನರ್ ಸ್ಥಾಪಿಸಲು ಅನುಕೂಲವಾಗುತ್ತದೆ. ಹಳೆಯ ನಾಮಶೇಷವಾಗುವುದು, ಹೊಸ ನಾಮ ಹುಟ್ಟುವುದು, ಕೆಲವೊಮ್ಮೆ ಹಳೆಯ ನಾಮ ಹೊಸನಾಮ ರೂಪದಲ್ಲಿ ಮುಂದುವರೆಯುವುದು. ಈ ಸ್ಥಳ ನಾಮಗಳ ಅಧ್ಯೆಯನ ಮಾಡುವುದರಿಂದ ಒಂದು ಸ್ಥಳ ಉಗಮ ಮತ್ತು ವಿಕಾಸ, ಭೌಗೋಳಿಕ, ಐತಿಹಾಸಿಕ ಹಾಗೂ ಸಾಮಾಜಿಕ ಹಿನ್ನೆಲೆಯ ಹಲವು ಮುಖಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ವಿದ್ವಾಂಸರು ಅಭಿಪ್ರಾಯ ಪಟ್ಟಿರುವಂತೆ ಇತ್ತೀಚಿನ

ಸಂದರ್ಭದಲ್ಲಿ ಪ್ರಾಚೀನ ಸಂಸ್ಕೃತಿಯನ್ನು ಪಉನರ್ ಸ್ಥಾಪಿಸುವಲ್ಲಿ ಶಾಸನಗಳು ಸಾಹಿತ್ಯ ಕೃತಿಗಳಂತೆಯೇ ನಾಮಗಳು ಕೂಡ ಸಹಾಯಕ ಸಾಮಾಗ್ರಗಳಾಗುತ್ತವೆ. ಸ್ಥಳನಾಮಗಳು ಸಾಮಾಜಿಕವಾಗಿ ನಿರ್ಮಾಣಗೊಳ್ಳಲು ವ್ಯಕ್ತಿ, ಕುಟುಂಬ, ವಂಶ, ಜಾತಿ ಈ ಹಲವು ಕಾರಣದಿಂದ ಉದ್ಯೋಗ ಮತ್ತು ಜನಾಂಗವನ್ನಾಧರಿಸಿ, ಕೆಲವು ಸ್ಥಳನಾಮಗಳು ನಿರ್ಮಾಣವಾಗಿರುವುದನ್ನು ಇಲ್ಲಿ ವಿವರಿಸಲಾಗಿದೆ. ಮಾನವ ತನ್ನ ಬದುಕಿನ ಆಸರೆಯಿಂದ ನೆಲೆನಿಂತು, ತಾನು ನಿರ್ಮಿಸಿಕೊಂಡಂತಹ ಸಂದರ್ಭದಲ್ಲಿ ವೃತ್ತಿ ಹಾಗು ತನ್ನ ಸಮಾಜದ ಕಸುಬುಗಳಿಗೆ ಸಂಬಂಧಿಸಿರುತ್ತದೆ. ಎಪಿಗ್ರಾಫಿಯ ಕರ್ನಾಟಕದಲ್ಲಿ ತಿಳಿಸಿರುವಂತೆ ಜನಪದರ ಜೀವಾಳ ಇರುವುದು ಹೊಲಗದ್ದೆ, ಕೆರೆ, ಕಟ್ಟೆ ಹೊಳೆಗಳಲ್ಲಿ ಬೇಸಾಯಕ್ಕೆ ಅನುಕೂಲವಾಗುವಂತೆ ಕೆರೆಗಳನ್ನು ಕಟ್ಟಿಸುವುದು ಹಾಗೆ ಕಟ್ಟಿಸಿದ ಕೆರೆಗಳನ್ನು ಕಾಪಾಡಿಕೊಂಡು ಬರುವುದು. ಅಂದಿನ ಸಾಮಾಜಿಕ ಮೌಲ್ಯಗಳಲ್ಲಿ ಒಂದಾಗಿದೆ. ಇಲ್ಲಿನ ಜನರು ವಿವಿಧ ವೃತ್ತ, ಕುಲಕಸುಬನ್ನು ಮುಂದುವರಿಸಿಕೊಂಡು ಬಂದಿರುವುದನ್ನು ಸ್ಥಳನಾಮಗಳಲ್ಲಿ ಉಳಿದುಕೊಂಡು ಬಂದಿರುವುದನ್ನು  ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**

1. ಎಪಿಗ್ರಾಫಿಯ ಕರ್ನಾಟಕ ಸಂಪುಟ : ಮುರು– ಮೈಸೂರು ವಿಶ್ವವಿದ್ಯಾನಿಲಯ ಪ್ರಸರಾಂಗ ಮೈಸೂರು
2. ಹೆಗ್ಗಡದೇವನಕೋಟೆ ತಾಲ್ಲೂಕು ಗ್ಯಾಸೆಟಿಯರ್ ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು–2011
3. ಗ್ರಾಮನಾಮ ದೀಪಿಕೆ ಡಾ. ವಿಶ್ವನಾಥ ದೇವಿ ಪ್ರಕಾಶನ ಮೈಸೂರು 2009
4. ಬೆರೆಕೆ ಸೊಪ್ಪು ಡಾ. ದೇ.ಜವರೇಗೌಡ ಸುರಭಿ ಪ್ರಕಾಶನ ಮೈಸೂರು
5. ತುಳುನಾಡಿನ ಸ್ಥಳನಾಮಗಳು ಕೆಮ್ತೂರು ರಘುಪತಿಭಟ್
6. ಕಾಕನಕೋಟೆ ಡಾ. ಮಾಸಿ ವೆಂಕಟೇಶ ಅಯ್ಯಂಗಾರ್
7. ವ್ಯಕ್ತಗಳಿಂದ ಪಡೆದ ಮಾಹಿತಿ ಸ್ಥಳೀಯರು